ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇವರಿಗೆ ಸಬ್ಸಿಡಿಯನ್ನು ಯಾವರೀತಿ ಕೊಡುತ್ತೀರಿ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀಮತಿ ಚಂದ್ರಪ್ರಭಾ ಅರಸ್.— ಈಗ ಮಾರ್ಕೆಟ್ ಸೆಸ್ ಮೂಲಕ ಏನು ಹಣ ಸಂಗ್ರಹವಾಗುತ್ತಿದೆ, ಈ ಹಣವನ್ನು ಸಹಾಯಧನದ ಮೂಲಕ ರೇಷ್ಮೆ ಬೆಳೆಗಾರರಿಗೆ ಮತ್ತು ರೀಲರ್ಸ್‌ಗೆ ಯಾವರೀತಿ ಕೊಡಬೇಕು ಎಂಬ ಬಗ್ಗೆ ಒಂದು ಯೋಜನೆಯನ್ನು ರೂಪಿಸುತ್ತಿದ್ದೇವೆ, ಈ ಯೋಜನೆಯನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಅಂತ್ಯೋದಯ ಕಾರ್ಯಕ್ರಮದ ಮೇರೆಗೆ ಮಂಜೂರಾದ ಜನತಾ ಗೃಹಗಳು

೩೯೨ (೧೦೦) ಶ್ರೀ ಬಾಕಿಲ ಹುಕ್ರಪ್ಪ (ಸುಳ್ಯ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ:—

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಈ ವರ್ಷದ ಅಂತ್ಯೋದಯ ಕಾರ್ಯಕ್ರಮದ ಪ್ರಕಾರ ಎಷ್ಟು ಜನತಾ ಮನೆಗಳನ್ನು ಮಂಜೂರು ಮಾಡಲಾಗಿದೆ, ಇದರಲ್ಲಿ ಸುಳ್ಯ ಮತ್ತು ಪುತ್ತೂರು ಕ್ಷೇತ್ರಗಳಲ್ಲಿ ಎಷ್ಟು?

ಆ) ಪ್ರತಿಯೊಂದು ಮನೆಗೂ ಮಂಜೂರು ಮಾಡಿರುವ ಹಣವೆಷ್ಟು;

ಇ) ಸರಕಾರದವರು ಕಟ್ಟಿಸಿದ ಜನತಾ ಮನೆಗಳು ಹೆಚ್ಚಾಗಿ ಬಿದ್ದುಹೋಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ.

ಶ್ರೀಮಾನ್ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ವಸತಿ ಮಂತ್ರಿಗಳು).—

ಅ) ಇಲ್ಲಿಯವರೆಗೆ ಅಂತ್ಯೋದಯ, ಯೋಜನೆಯಡಿಯಲ್ಲಿ ಯಾವ ಮನೆಗಳನ್ನು ಮಂಜೂರು ಮಾಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸುಳ್ಯದಲ್ಲಿ ೧೦ ಮನೆಗಳು ಬಿದ್ದುಹೋಗಿವೆ.

ಶ್ರೀ ಬಾಕಿಲ ಹುಕ್ರಪ್ಪ.— ಸುಳ್ಯದಲ್ಲಿ ಹತ್ತು ಜನತಾ ಮನೆಗಳು ಬಿದ್ದುಹೋಗಲು ಕಾರಣವೇನು?

ಶ್ರೀ ಎ. ಲಕ್ಷ್ಮೀಸಾಗರ್.— ಹೆಚ್ಚು ಮಳೆ ಬಂದ ಕಾರಣ ಬಿದ್ದುಹೋಗಿವೆ.

ಶ್ರೀ ಕೆ. ರಾಮಭಟ್.— ಹಾಗಿದ್ದರೆ ಬೇರೆ ಜನತಾ ಮನೆಗಳು ಏತಕ್ಕೆ ಬಿದ್ದುಹೋಗಿಲ್ಲ ?

ಅಧ್ಯಕ್ಷರು.— ಈಗ ಕಾಂಕ್ರೀಟ್ ಕಟ್ಟಡಗಳೇ ಬಿದ್ದು ಹೋಗುತ್ತಿವೆ, ಏನು ಮಾಡುವುದು ?

ಶ್ರೀ ಕೆ. ಶಿವಮೂರ್ತಿ.— ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಜನತಾ ಮನೆಗಳು ಹೆಚ್ಚು ಬಿದ್ದು ಹೋಗುತ್ತಿರುವುದಕ್ಕೆ ಕಾರಣವೇನು?

ಅಧ್ಯಕ್ಷರು.— ಇಲ್ಲಿ ಪ್ರಶ್ನೆ ಇರುವುದು ಅಂತ್ಯೋದಯ ಯೋಜನೆಯ ಬಗ್ಗೆ, ಜನತಾ ಮನೆಗಳ ವಿಚಾರವಲ್ಲ.

ಶ್ರೀ ಬಾಕಿಲ ಹುಕ್ರಪ್ಪ.— ಹುಡ್ಕೋ ಯೋಜನೆಯ ಸಹಾಯದಿಂದ ಎಷ್ಟು ಜನತಾ ಮನೆಗಳನ್ನು ಕಟ್ಟಿಸಲಾಗಿದೆ?

ಶ್ರೀ ಎ. ಲಕ್ಷ್ಮೀಸಾಗರ್.— ಇದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಹಾಕಿದರೆ ಉತ್ತರ ಕೊಡುತ್ತೇನೆ.